ಗುರುತಿಸಿದರು. ಇದನ್ನು ಯಾರು ಗುರುತಿಸಬೇಕು? ಗ್ರಾಮಸಭೆಗಳ ಮುಖಾಂತರ ಗುರುತಿಸುವುದು ಒಂದು ಪ್ರಕ್ರಿಯೆಯಾಗಿದೆ. ಮೊನ್ನೆ 30 ಪರ್ಸೆಂಟ್ ಘೋಷಿಸಿದ್ದು ಕೇವಲ ಎಪಿಎಲ್ ಬೆಲೆಗಳಲ್ಲಿ ಮಾತ್ರ ಇಳಿಸಿದ್ದಾರೆ. ಇವತ್ತು ಅವರು ಆ ಬೆಲೆಗಳನ್ನು ಏಕೆ ಇಳಿಸಿದರು, 'ಎಪಿಎಲ್ ಎಂದರೆ ಮೊದಲು ಅಕ್ಕಿಗೆ ರೂಪಾಯಿ 11-30 ಪೈಸೆ ಬೆಲೆಯನ್ನು ನಿಗದಿಪಡಿಸಿದ್ದರು. ಇಂದು ಮಾರ್ಕೆಟ್‌ನಲ್ಲಿ ಅಕ್ಕಿಗೆ ಅದಕ್ಕಿಂತ ಕಡಿಮೆ ದರದಲ್ಲಿ ಸಿಗುತ್ತಿರುವುದರಿಂದ, ಎಲ್ಲಿಯೂ ಯಾವ ರಾಜ್ಯದಲ್ಲಿ ಎಪಿಎಲ್‌ನಲ್ಲಿ ಲಿಫ್ಟ್ ಆಗಲಿಲ್ಲ. ಅಕ್ಕಿ ಕ್ವಿಂಟಾಲ್‌ಗೆ 11ರೂಪಾಯಿ 30 ಪೈಸೆ ಇದ್ದದನ್ನು ಇವತ್ತು 8 ರೂಪಾಯಿ 30 ಪೈಸೆಗೆ ಇಳಿಸಿದರು. ಗೋಧಿಯನ್ನು 9.10 ರೂಪಾಯಿ ಇದ್ದದನ್ನು 6.10 ರೂಪಾಯಿಗೆ ಇಳಿಸಿದರು, ಕೇವಲ ಎಪಿಎಲ್ ಬೆಲೆಯನ್ನು ಮಾತ್ರ ಇಳಿಸಿದ್ದಾರೆ. ಆದರೆ ಬಿಪಿಎಲ್ ಬೆಲೆಯನ್ನು ಇಳಿಸಿಲ್ಲ; ಹಳೆಯ ದರದಲ್ಲಿ ನಾವು ವಿತರಿಸುತ್ತಿದ್ದೇವೆ. ಈ ಬಗ್ಗೆ ನಿನ್ನೆ ಕೇಂದ್ರ ಸರ್ಕಾರದಿಂದ ಆದೇಶ ಬಂದಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕೇಂದ್ರ ಸರ್ಕಾರದ ಈ ಎರಡು ಯೋಜನೆಗಳ ಬಗ್ಗೆ ರಾಜ್ಯ ಸರ್ಕಾರ ನಿರ್ಲಕ್ಷ್ಯ ಮಾಡುತ್ತಿದೆ ಎಂಬ ಭಾವನೆ ಬರುತ್ತಿದೆ, ಅದು ಆಗದಂತೆ ಎಚ್ಚರಿಕೆಯನ್ನು ವಹಿಸಬೇಕಾಗಿದೆ.

ಶ್ರೀ ಡಿ.ಬಿ.ಇನಾಂದಾರ್: ರಾಜ್ಯ ಸರ್ಕಾರ ಇವತ್ತು ಫಲಾನುಭವಿಗಳನ್ನು ಆಯ್ಕೆ ಮಾಡುವಂತಹ ಸಂದರ್ಭದಲ್ಲಿ ಅನೌನ್ಸ್ ಆದ ದಿವಸವನ್ನು ಇವತ್ತು ಇಂಪ್ಲಿಮೆಂಟ್ ಮಾಡುವುದಕ್ಕೆ ಯಾವ ರಾಜ್ಯಕ್ಕೂ ಸಾಧ್ಯವಾಗಲಿಲ್ಲ. ಗ್ರಾಮಸಭೆಗಳ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ವಿಳಂಬವಾಗಿದೆಯೇ ಹೊರತು ರಾಜ್ಯ ಸರ್ಕಾರ ಈ ಕಾರ್ಯಕ್ರಮವನ್ನು ಅಲಕ್ಷ್ಯ ಮಾಡಿದೆ ಎಂಬ ಮಾತನ್ನು ದಯವಿಟ್ಟು ಹೇಳಬಾರದು.

ಬಾಗೇಪಲ್ಲಿ ತಾಲ್ಲೂಕಿನಾದ್ಯಂತ ಬಾಕಿ ಇರುವ ಪಡಿತರ ಚೀಟಿ ವಿತರಣೆ ಬಗ್ಗೆ.

186(2371)

ಶ್ರೀ ಸಂಪಂಗಿ ಎನ್.(ಬಾಗೇಪಲ್ಲಿ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕಿನಾದ್ಯಂತ ಇರುವ ಪಡಿತರದಾರರ ಸಂಖ್ಯೆ ಎಷ್ಟು (ವಿವರ ನೀಡುವುದು)

ಅ) ಬಾಗೇಪಲ್ಲಿ ತಾಲ್ಲೂಕ ಗುಡಿಬಂಡೆ ತಾಲ್ಲೂಕು ಹಾಗೂ ನಗರ ಗೆರೆ ಹೋಬಳಿಗಳಲ್ಲಿ ಪಡಿತರದಾರರ ಸಂಖ್ಯೆ ಎಷ್ಟು (ವಿವರ ನೀಡುವುದು)

ಇ) ಹಾಗಿದ್ದಲ್ಲಿ ಇನ್ನು ಪಡಿತರದಾರರ ಚೀಟಿಯು ವಿತರಣೆಯಾಗದೇ ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಈ) ಈ ಬಾಕಿ ಉಳಿದಿರುವ ಪಡಿತರದಾರರ ಚೀಟಿಯ ವಿತರಣೆಯನ್ನು ಎಂದಿನಿಂದ ಮಾಡಲಾಗುವುದು?

ಶ್ರೀ ಡಿ.ಜಿ.ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು):

ಅ) ಬಾಗೇಪಲ್ಲಿ ತಾಲ್ಲೂಕಿನಲ್ಲಿ ಒಟ್ಟು 41725 ಪಡಿತರ ಚೀಟಿಗಳಿರುತ್ತವೆ.

ಆ) ಬಾಗೇಪಲ್ಲಿ ತಾಲ್ಲೂಕು 41725 ಪಡಿತರ ಚೀಟಿ

ಗುಡಿಬಂಡೆ ತಾಲ್ಲೂಕು 12191 ಪಡಿತರ ಚೀಟಿ

ನಗರಗೆರೆ ಹೋಬಳಿ
(ಗೌರಿಬಿದನೂರು ತಾ) 8117 ಪಡಿತರ ಚೀಟಿ

ಇ) ಬಾಕಿ ಅರ್ಜಿ ಸಂಖ್ಯೆ:

ಬಾಗೇಪಲ್ಲಿ ತಾಲ್ಲೂಕು	500
ಗುಡಿಬಂಡೆ ತಾಲ್ಲೂಕು	280
ನಗರಗೆರೆ ಹೋಬಳಿ	95
	875

ಈ) ಇತ್ತೀಚೆಗೆ ಗ್ರಾಮ ಸಭೆಗಳಲ್ಲಿ ಹಳದಿ ಕಾರ್ಡುಗಳನ್ನು ಪಡೆಯಲು ಅರ್ಹರಿರುವ ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಆ ಪಟ್ಟಿಯಲ್ಲಿ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿರುವ ಅರ್ಜಿದಾರರು ಒಳಗೊಂಡಿರುವ ಸಾಧ್ಯತೆ ಇರುತ್ತದೆ. ಗ್ರಾಮ ಸಭೆಯಲ್ಲಿ ಗುರುತಿಸುವ ಕುಟುಂಬಗಳಿಗೆ ಅರ್ಹತೆಯ ಆಧಾರದ ಮೇಲೆ ಹಳದಿ ಪಡಿತರ ಚೀಟಿಗಳನ್ನು ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಳದಿ ಪಡಿತರ ಚೀಟಿಗಳ ವಿತರಣೆಯ ನಂತರ ಉಳಿದಿರುವ ಅರ್ಜಿಗಳನ್ನು ಪರಿಶೀಲಿಸಿ ಪಡಿತರ ಚೀಟಿ

ವಿತರಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎನ್.ಸಂಪಂಗಿ: ಅಧ್ಯಕ್ಷರೆ, ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ 875 ಪಡಿತರ ಚೀಟಿಯ ಅರ್ಜಿಗಳು ಬಾಕಿ ಇವೆ ಎಂದು ತಿಳಿಸಿದ್ದು, ಅವು ಸುಮಾರು ದಿವಸಗಳಿಂದ ಬಾಕಿ ಉಳಿದುಕೊಂಡು ಬಂದಿದ್ದು, ಅವುಗಳ ವಿತರಣೆಯನ್ನು ಮಾಡುವುದು ಯಾವತ್ತು ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಡಿ.ಬಿ.ಇನಾಂದಾರ್: ಈ ಬಗ್ಗೆ ಗ್ರಾಮಸಭೆಗಳ ಮುಖಾಂತರ ಲಿಸ್ಟ್ ಬಂದಿದೆ, ಈಗಿರತಕ್ಕಂತಹ ಮೊದಲಿನ ಫಲಾನುಭವಿಗಳಿಗೆ ಕೊಟ್ಟ ನಂತರ ಪ್ರತಿಯೊಬ್ಬರಿಗೆ ಬಿಪಿಎಲ್ ಕಾರ್ಡುಗಳನ್ನು ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಎನ್.ಸಂಪಂಗಿ: ಬಾಗೇಪಲ್ಲಿ ಕಡುಬಡತನವಾಗಿರುವ ಒಂದು ಪ್ರದೇಶವಾಗಿದೆ. 875 ಅರ್ಜಿಗಳು ಬಂದಿವೆ ಎಂದು ಹೇಳುತ್ತಾರೆ, ಆದರೆ ಇಲ್ಲಿ ಇನ್ನು ಹೆಚ್ಚಿಗೆ ಅರ್ಜಿಗಳು ಬಂದಿರುತ್ತವೆ.

ಶ್ರೀ ಡಿ.ಬಿ.ಇನಾಂದಾರ್: ಹಸಿರು ಕಾರ್ಡುಗಳ ಬಗ್ಗೆ ಮಾಹಿತಿ ಬಂದಿದ್ದು, ರಾಜ್ಯ ಸರ್ಕಾರವು ಹೊಸದಾಗಿ ಬಿಪಿಎಲ್ ಕಾರ್ಡುಗಳನ್ನು ಕೊಡುವಂತಹ ಒಂದು ವ್ಯವಸ್ಥೆಯನ್ನು ಮಾಡುತ್ತದೆ. ಗ್ರಾಮಸಭೆಗಳ ಲಿಸ್ಟ್‌ನಲ್ಲಿ ಅರ್ಹತೆ ಇದ್ದವರನ್ನು ತೆಗೆದುಕೊಂಡು ಹಾಗೂ ಕೆಲವೊಂದು ಗ್ರಾಮಸಭೆಗಳ ಮೂಲಕ ಶಿಫಾರಸ್ಸು ಮಾಡಿದ್ದನ್ನೂ ಸಹ ತೆಗೆದುಕೊಂಡು ಕನ್ಸಿಡರ್ ಮಾಡಿ ಕೊಡಲಾಗುತ್ತದೆ.

ಶ್ರೀ ಎನ್.ಸಂಪಂಗಿ: ಮಾನ್ಯ ಆಹಾರ ಮಂತ್ರಿಗಳಿಗೆ ನಾನು ಈ ಪ್ರಶ್ನೆಯನ್ನು ಏತಕ್ಕಾಗಿ ಕೇಳುತ್ತಿದ್ದೇನೆಂದರೆ, ಬಾಗೇಪಲ್ಲಿಯಲ್ಲಿ ಯಾವಾಗಲೂ ಬರ ಪರಿಸ್ಥಿತಿ ಇರುತ್ತದೆ. ಇಲ್ಲಿ ಪಡಿತರ ಚೀಟಿಗಳನ್ನು ಕೊಡದೇ ಹೋದರೆ ಆಹಾರ ಪರಿಸ್ಥಿತಿಗೆ ತೊಂದರೆಯಾದರೆ ವಲಸೆ ಹೋಗುವಂತಹ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಬಾಗೇಪಲ್ಲಿಯನ್ನು ಅತಿ ಸೂಕ್ಷ್ಮ ಪ್ರದೇಶವೆಂದು ಗುರುತಿಸಿ, ಆದಷ್ಟು ಬೇಗನೆ ಪಡಿತರ ಚೀಟಿಯನ್ನು ಕೊಟ್ಟು 8 ಕೆಜಿ ಅಕ್ಕಿಯ ಬದಲಾಗಿ 25 ಕೆಜಿಯನ್ನು ಕೊಡಿ. ಏಕೆಂದರೆ ಅಲ್ಲಿ ಗೋಧಿಯನ್ನು ಯಾರು ತೆಗೆದುಕೊಳ್ಳುವುದಿಲ್ಲ. ಅಲ್ಲಿ ಅಕ್ಕಿಯನ್ನು ಮಾತ್ರ ಉಪಯೋಗಿಸುತ್ತಾರೆ, ಮಾನ್ಯ ಮುಖ್ಯಮಂತ್ರಿಗಳೂ ಕೂಡ ಇಲ್ಲಿರುವುದರಿಂದ ಅವರ ಗಮನಕ್ಕೆ ತಂದು ಬಾಗೇಪಲ್ಲಿಯನ್ನು ಶಾಶ್ವತ ಬರ ಪ್ರದೇಶವೆಂದು ಘೋಷಿಸಿ ಪಡಿತರ ಚೀಟಿಯನ್ನು ಹೆಚ್ಚಿಗೆ ಮಾಡಿ ಆಹಾರಧಾನ್ಯವನ್ನು ಕೂಡ ಹೆಚ್ಚಿಗೆ ಮಾಡಬೇಕೆಂದು ಕೋರುತ್ತೇನೆ.